

# ಡಿಸೆಂಬರಲ್ಲವೆ ಈಗ..!

**ಕಾಲ್ಪನಿಕವೋ, ನಿಜವೋ.. ಕ್ರಿಸ್‌ಮಸ್ ಸಾಂತಾ ಕ್ಲಾಸ್ ಆಗಲೀ, ನಮ್ಮ ಕಿನ್ನರ ದೇವತೆಗಳೇ ಆಗಲಿ; ಕೊಡುಗೆಯ ಆಸೆಗೇ ಆದರೂ ಒಳ್ಳೆಯದನ್ನು ಮಾಡಬೇಕೆಂಬ ಹಂಬಲವನ್ನು ಮಕ್ಕಳಲ್ಲಿ ಹುಟ್ಟಿಸುವಂತಾದರೆ ಅದು ಒಳ್ಳೆಯದೇ ತಾನೆ?**

■ **ಡಾ. ಕೆ.ಎಸ್. ಪವಿತ್ರ**

ನಾವು ಚಿಕ್ಕವರಿದ್ದಾಗ ಕ್ರಿಸ್‌ಮಸ್ ಎಂದರೆ ನಮಗೆ ಗೊತ್ತಿದ್ದದ್ದು ಡಿಸೆಂಬರ್ 25, ಶಾಲೆಗೆ ರಜಾ ಎಂದಷ್ಟೇ. ಕಾನ್ವೆಂಟ್ ಶಾಲೆಗೆ ಹೋಗುತ್ತಿದ್ದ ಮಕ್ಕಳಿಗೆ ಇನ್ನೊಂದಿಷ್ಟು; ಗೋದಲಿ, ನಕ್ಷತ್ರ, ಯೇಸು ಎಂಬ ಶಬ್ದಗಳು ಗೊತ್ತಿದ್ದವು. ನನಗೆ ಸುಮಾರು 11 ವರ್ಷವಿರಬೇಕು. ಸ್ನೇಹಿತೆಯೊಬ್ಬಳ ಮನೆಯ ಪುಸ್ತಕದ ಕಪಾಟಿನಲ್ಲಿ ಪುಸ್ತಕವೊಂದು ಕಣ್ಣಿಗೆ ಬಿತ್ತು. ‘ಪ್ಲಂ ನದಿಯ ದಡದಲ್ಲಿ’ ಎಂಬ ಆ ಪುಸ್ತಕ ವಿಚಿತ್ರ ಆದರೆ ಸುಂದರವಾಗಿತ್ತು. ಹೊದಿಕೆಯ ಮೇಲೆ ತೈಲಚಿತ್ರದ ರೀತಿಯ, ‘ಫಾರಿನ್’ ಕುಟುಂಬದ, ನಾಯಿಯೊಂದರ ಚಿತ್ರ, ಒಳಗೆ ಕನ್ನಡದಲ್ಲಿಯೇ ಇದ್ದರೂ ಅಮೆರಿಕದ ಕುಟುಂಬದ ಬಗೆಗಿನ ವಿವರಗಳು. ಪ್ರತಿಯೊಂದು ಪುಟದಲ್ಲಿ ಒಂದೊಂದು ಶೀರ್ಷಿಕೆಗೆ ಸರಿಹೊಂದುವ ಚಿತ್ರ.

ಲಾರಾ ಎಂಬ ಹುಡುಗಿ ತನ್ನ ‘ಪಾ’ ‘ಮಾ’, ಸೋದರಿಯರು ಮತ್ತು ಅವರ ಪುಟ್ಟ –ಗಟ್ಟಿ ನಾಯಣ್ಣ ‘ಜ್ಯಾಕ್’ ಜೊತೆಗೆ ವಿಸ್ಕಾನ್ಸಿನ್ನಿನ ಕಾಡುಗಳಿಂದ ಡಕೋಟಾದ ಪ್ರಯರಿ ಪ್ರದೇಶಕ್ಕೆ ವಲಸೆ ಬಂದ ಕಥೆ ಅದಾಗಿತ್ತು. ಪ್ರೊ.ಎಸ್. ಅನಂತನಾರಾಯಣ ಅವರು ಕನ್ನಡಕ್ಕೆ ಅನುವದಿಸಿದ ಪುಸ್ತಕ ಮಾಲೆಯಾಗಿತ್ತು. ಅಂತೂ ಇಂತೂ ಹುಡುಕಿ ಲಾರಾ ಇಂಗಲ್ಸ್ ವೈಲ್ಡರ್ ಸರಣಿಯ 8 ಪುಸ್ತಕಗಳನ್ನೂ ಓದಿದ್ದೆ. ಅದರಲ್ಲಿ ನನ್ನ ಆಗಿನ ಬೆಳೆಯುವ ಮುಗ್ಧ ಮನಸ್ಸಿಗೆ ಆಪ್ತವಾದ ಅಂಶ, ಲಾರಾಳ ಕುಟುಂಬ ಎಷ್ಟೋ ಏಳು ಬೀಳುಗಳ ನಡುವೆ, ಪ್ರತಿ ಪ್ರದೇಶದಲ್ಲಿ ಮನೆ ಮಾಡಿದಾಗಲೂ ಆಚರಿಸುವ ಸಂಭ್ರಮದ ಕ್ರಿಸ್‌ಮಸ್.

ನಮ್ಮಷ್ಟೇ ಪುಟ್ಟ ಮಕ್ಕಳಾದ ಲಾರಾ, ಮೇರಿ, ಕ್ಯಾರಿ, ಗ್ರೇಸ್, ‘ಪಾ’ ‘ಮಾ’ ರಿಗೆ, ತಮ್ಮಲ್ಲೇ ಒಬ್ಬರಿಗೊಬ್ಬರಿಗೆ ಕ್ರಿಸ್‌ಮಸ್ ಬಳುವಳಿಗಳನ್ನು ತಾವೇ ಮಾಡುವುದು ನಮಗೆ ಆಶ್ಚರ್ಯಕರವಾಗಿತ್ತು. ಅದೂ ಆ ಬಳುವಳಿಗಳು ದೊಡ್ಡವು, ಬೆಲೆಯುಳ್ಳವೇನೂ ಆಗಿರುತ್ತಿರಲಿಲ್ಲ. ಕಾಗದದಲ್ಲಿಯೇ ಮಾಡಿದ ಒಂದು ಗೊಂಬೆ, ಹುಡುಗಿಯರು ಹೆಣೆದ ಉಲನ್ ಕೈಗವಸುಗಳು, ಕಾಲುಚೀಲಗಳು, ಸವೆದ ಕಂಬಳಿಯಿಂದ ಮಾಡಿದ ಶೂಗಳು, ಹೀಗೆ ಚಿಕ್ಕ ಚಿಕ್ಕ ತಾವೇ ಮಾಡಿದ ಬಳುವಳಿಗಳು. ಪುಟ್ಟ ತಂಗಿಗಾಗಿ ಕೂಡಿಸಿಟ್ಟ ಬಣ್ಣಬಣ್ಣದ, ವಿವಿಧ ಗುಂಡಿಗಳ ಮಾಲೆ! ಇವುಗಳನ್ನು ಒಬ್ಬರಿಗೊಬ್ಬರು ಮುಚ್ಚಿಟ್ಟು ಮಾಡುವ, ನಂತರ ಕೊಡುವ ಸಂಭ್ರಮ, ಸಡಗರ, ಅಚ್ಚರಿಯ ಭಾವನೆಗಳು ಆ ಪುಟಗಳನ್ನು ಓದುವ ನಮಗೂ ಹರಡುವಂತಿತ್ತು.

ಅಲ್ಲಿಯವರೆಗೆ ನಮಗೆ ಸಾಂತಾ ಕ್ಲಾಸ್‌ನ ಹೆಸರಷ್ಟೇ ಗೊತ್ತಿದ್ದದ್ದು. ಕೆಂಪು ಫರ್ ನಿಲುವಂಗಿ ತೊಟ್ಟ, ಕೆಂಪು ಟೋಪಿ–ಬಿಳೀ ಗಡ್ಡದ ಈ ಸಂತ ಹೊಗೆಗೂಡಿನೊಳಗಿಂದ, ಕ್ರಿಸ್‌ಮಸ್ ಬಳುವಳಿಗಳನ್ನು ಹೇಸರಗತ್ತೆಗಳ ಮೇಲೆ ಹೇರಿಕೊಂಡು, ಸ್ಲೆಜ್ ಗಾಡಿಯ ಮೇಲೆ ಮಂಜಿನ ಮೇಲೆ ಜಾರುತ್ತಾ ಬರುತ್ತಾನೆ ಎಂಬ ವಿವರಗಳು ನಮ್ಮ ಕಲ್ಪನೆಯಲ್ಲಿ ಮೂಡಲು ಸಾಧ್ಯವಾಗಿದ್ದು ಲಾರಾಳ ವರ್ಣನೆಗಳಿಂದ. ಲಾರಾಳ ಜೊತೆಗೇ ನಾವೂ ಬೆಳೆಯುತ್ತಿದ್ದೆವಷ್ಟೇ! ‘ಸಾಂತಾ ಕ್ಲಾಸ್’ ಯಾರು ಎಂಬುದರ ಬಗೆಗಿನ ನಮ್ಮ ಕಲ್ಪನೆ ಬದಲಾದದ್ದು, ಒಂದರ್ಥದಲ್ಲಿ ಕಲ್ಪನೆಯಿಂದ ವಾಸ್ತವಕ್ಕೆ ಇಳಿದದ್ದು ಲಾರಾಳ ಕಥೆ ಓದಿದಾಗಲೇ, ಲಾರಾಳಿಗೆ ಗೊತ್ತಾದಾಗಲೇ!